ನಾಳೆ ಸಂಜೆ ಸಹ ಆಗುತ್ತದೆ. ಆದ್ದರಿಂದ ನಾಳೆ ಬೆಳಿಗ್ಗೆ ರಾಯರೆಡ್ಡಿಯವರು ಮತ್ತು ವಾಟಾಳ್ ನಾಗರಾಜ್‌ರವರು ಇಬ್ಬರು ಇಲ್ಲವೆ ಮೂರು ಜನರು ಮಾತನಾಡಿದ ಮೇಲೆ ಉತ್ತರ.

ಶ್ರೀ ಸಿದ್ದರಾಮಯ್ಯ : 4 ಜನರಿದ್ದಾರೆ. ಅವರು ನಾಳೆ ಮಾತನಾಡಲಿ ಬಿಡಿ.

ಉಪಾಧ್ಯಕ್ಷರು : 4 ಜನರಿಗಿಂತ ಜಾಸ್ತಿ ಆಗಬಾರದು. ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11–00 ಗಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 45 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 1ನೇ ಆಗಸ್ಟ್ ಮಾಹೆ 2007ರ ಬುಧವಾರದಂದು ಬೆಳಿಗ್ಗೆ 11–00 ಗಂಟೆಗೆ ಸೇರಲು ನಿಃಶ್ಚಯಿಸಿತು)

ಅನುಬಂಧ–2

ನ್ಯಾಯಾಲಯದ ಕಟ್ಟಡ ನಿರ್ಮಾಣ ಬಗ್ಗೆ

1325 (1591) ಹೆಚ್.ನಿಂಗಪ್ಪ (ಕುಣಿಗಲ್) ವಿಧಾನಸಭಾ ಸದಸ್ಯರು: ಮಾನ್ಯ ಗೃಹ, ಕಾನೂನು ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ನ್ಯಾಯಾಲಯಗಳಿಗೆ ಅವಶ್ಯಕ ಕಟ್ಟಡಗಳ ಕೊರತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅವಶ್ಯಕ ಕಟ್ಟಡಗಳ ಮಂಜೂರಾತಿ ಸರ್ಕಾರ ಮುಂದಾಗುವುದೆ?

ಇ) ಯಾವ ಅವಧಿಯೊಳಗಾಗಿ ಮಂಜೂರಾತಿ ನೀಡಲಾಗುವುದು?

ಶ್ರೀ ಎಂ.ಪಿ.ಪ್ರಕಾಶ್ (ಗೃಹ, ಕಾನೂನು ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆ ಸಚಿವರು) :

ಅ) ತುಮಕೂರು ಜಿಲ್ಲಾ ನ್ಯಾಯಾಧೀಶರಿಂದ ಅಂತಹ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.